ಸಂ: ಜಸಅ/01/ಸಅಅ/ವಾನಸು/2023 ದಿನಾಂಕ: 05.03.2023

***ಪ್ರಕಟಣೆ***

ವಿಷಯ: ವಾಟ್ಸಾಪ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ನಕಲಿ ಪ್ರಕಟಣೆಯ ಕುರಿತು ಸ್ಪಷ್ಟೀಕರಣ ಹೇಳಿಕೆ.

* * * * * * *

ಪ್ರಕಟಣೆ ಸಂಖ್ಯೆ: ಜಸಂಅ 205 ಇಎಸ್ಎಂ ನೇರ ನೇಮಕಾತಿ 2021 ಎಂದಿರುವ ಜಲಸಂಪನ್ಮೂಲ ಇಲಾಖೆಯಲ್ಲಿ ಕಿರಿಯ ಅಭಿಯಂತರ ಹಾಗೂ ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಸಹಾಯಕರ ನೇರ ನೇಮಕಾತಿ ಹುದ್ದೆಗಳಿಗೆ ಸಂಬಂಧಿಸಿದಂತೆ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ ಎಂಬ ವಿಷಯವನ್ನು ಹೊಂದಿರುವ, ದಿನಾಂಕರಹಿತವಾಗಿರುವ ಪ್ರಕಟಣೆಯೊಂದು ಎಚ್.ಎಂ. ಮಂಜುನಾಥ ಜೇವರ್ಗಿ, ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, (ಸೇವೆಗಳು- ಎ) ಎನ್ನುವಂತಹ ನಕಲಿ ಸಹಿಯೊಂದಿಗೆ ಮುಖ್ಯ ಇಂಜಿನಿಯರ್ ರವರ ಕಚೇರಿ, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಲೆಟರ್ ಹೆಡ್ ನಂತಿರುವ ನಕಲಿಯಾದ ಲೆಟರ್ ಹೆಡ್ ನಲ್ಲಿ ವಾಟ್ಸಾಪ್ ಸಾಮಾಜಿಕ ಸುದ್ದಿಯಲ್ಲಿ ಪ್ರಕಟಣೆಯೊಂದು ಹರಿದಾಡುತ್ತಿರುವುದು ದಿನಾಂಕ: 05.03.2023ರ ಬೆಳಗ್ಗೆ 10.00ರ ನಂತರ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಗಮನಕ್ಕೆ ಬಂದಿರುತ್ತದೆ. ಇಂತಹ ಆಯ್ಕೆಪಟ್ಟಿಯ ಪ್ರಕಟಣೆಯನ್ನು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಾಗಲಿ ಅಥವಾ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯಿಂದಾಗಲಿ ಹೊರಡಿಸಿರುವುದಿಲ್ಲ. ಈ ರೀತಿ ವಾಟ್ಸಾಪ್ ನಲ್ಲಿ ನೇಮಕಾತಿ ಆಯ್ಕೆ ಪಟ್ಟಿ ಎಂದು ಹರಿಯಬಿಟ್ಟಿರುವ ಪ್ರಕಟಣೆಯು ನಕಲಿಯಾಗಿರುತ್ತದೆ ಹಾಗೂ ಸಾರ್ವಜನಿಕರು ನಂಬಬಾರದೆಂದು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಪರವಾಗಿ ಈ ಪ್ರಕಟಣೆಯನ್ನು ಹೊರಡಿಸಿದೆ.

ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯದಲ್ಲದ ಲೆಟರ್ ಹೆಡ್ ನಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ನೇಮಕಾತಿಯ ನಕಲಿ ಆಯ್ಕೆಪಟ್ಟಿಯನ್ನು ಯಾರೂ ನಂಬಬಾರದೆಂದು ಈ ಮೂಲಕ ಪ್ರಕಟಿಸಿದೆ.

ಸಹಿ/-
ಮುಖ್ಯ ಇಂಜಿನಿಯರ್,
ಜಸಂಅಸಂ, ಬೆಂಗಳೂರು